ಅಮ್ಮನ ಬೆಲೆಯೇ ಗೊತ್ತಿಲ್ಲ ಹಾಗೆ ಸತಾಯಿಸ್ತಾನೆ.

'ತಿಳಿದೇ ಮಾಡ್ತಾನೋ ತಿಳಿಯದೆ ಮಾಡ್ತಾನೋ ಅರ್ಥವಾಗ್ತಿಲ್ಲ..' ಅವನ ನಡವಳಿಕೆಯಲ್ಲಿ ಒಂದನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದೆ. ತನ್ನ ಅನುಕೂಲಕ್ಕಾದರೆ ಬುದ್ಧಿವಂತಿಕೆ ಚೆನ್ನಾಗಿಯೇ ಇರುತಿತ್ತು. ತನಗೆ ಇಷ್ಟವಿಲ್ಲದ್ದಾದರೆ ದಾಂಧಲೆ ಎಬ್ಬಿಸಿ ಅಕ್ಕಪಕ್ಕದವರ ಗಮನ ಸೆಳೆಯುವ ಮಟ್ಟಿಗೆ ದೊಡ್ಡ ಗಂಟಲಿನಲ್ಲಿ ಪ್ರತಿಕ್ರಿಯಿಸಿ ಅಮ್ಮನ ಬಾಯಿ ಮುಚ್ಚಿಸುತ್ತಿದ್ದ. ಸಾವಿರಾರು ಟ್ಯೂಷನ್‌ಗೆ ಸುರಿದು ಡಿಗ್ರಿ ಮಾಡಿಸಿದ್ದಳು. ಆದರೆ ಮುಂದೆ ಓದಲು ತಾಕತ್ತಿಲ್ಲ ಕೆಲಸಕ್ಕೆ ಹೋಗಲು ಇಷ್ಟವಿಲ್ಲ. ಇದು ದೊಡ್ಡ ಆಘಾತ ಮಂದಾರಳಿಗೆ.

ಅಹಸ್ಕರನನ್ನು 'ಅಣ್ಣ' ಎಂದು ಕರೆಯುತಿದ್ದ. ಅವನ ಹತ್ತಿರವೂ ಹೇಳಿ ಪ್ರಯತ್ನಿಸಿದ್ದಾಗಿತ್ತು. ಸುಖವಿಲ್ಲ 'ಅಮ್ಮ, ಅವನು ಯಾವುದೋ ಆಂತರಿಕ ವರ್ತುಲವನ್ನೆಳೆದುಕೊಂಡು ಅದರಿಂದ ಹೊರಬರಲು ಇಚ್ಛಿಸುತ್ತಿಲ್ಲ. ಹೊರ ಸಂಪರ್ಕದ ಅವಶ್ಯಕತೆಯೇ ಇಲ್ಲದಷ್ಟು ಹುದುಗಿಹೋಗಿದ್ದಾನೆ. ಊಟ, ಬಟ್ಟೆ, ಅವನು ಬಯಸುವ ಐಷಾರಾಮಿ ಪೂರೈಸಲು ಆಂಟಿ ನಿರಾಕರಿಸುವವರೆಗೂ ಇವನು ಉದ್ಧಾರವಾಗೋಲ್ಲ. ಅವರಮ್ಮನೇ ಅವನಿಗೆ ಹಸಿವಿನ ಬೆಲೆ ಅರಿವಾಗುವ ಹಾಗೆ ಮಾಡಬೇಕಮ್ಮ' ಎಂದು ಕೈ ತೊಳೆದು ಕೊಂಡಿದ್ದ. ಉದ್ದೇಶಪೂರ್ವಕವಾಗಿ ನಡೆದುಕೊಳ್ತಾನೆ ಎಂಬ ಏಕಾಭಿಪ್ರಾಯ ನಮ್ಮೆಲ್ಲರಲ್ಲೂ ಮೂಡಿತ್ತು.

ಸುಮುಖನ ಇನ್ನೊಂದು ಮುಖದ ಅರಿವಾದಾಗ ಶಾಕ್ ಆಗಿದ್ದೆ. ಸಹಜವಾಗಿ ಅವನಿಗೆ ಹೇಳಿದ ಒಂದೆರಡು ಹಿತವಚನಗಳನ್ನು ಖಾರವಾಗಿ ತೆಗೆದುಕೊಂಡು ನನಗೇ ತೋಚಿದೆಲ್ಲ ಗೀಚಿ ಮೆಸೇಜ್ ಮಾಡಿ ನಂತರ ಮಂದಾರ ಕ್ಷಮೆ ಕೇಳುವಂತೆ ಮಾಡಿದ್ದ. ಈ ಕೆಲಸವನ್ನು ಮಂಜುಗೂ ಮಾಡಿ ಹಗೆ ಕಟ್ಟಿಕೊಂಡಿದ್ದ. ಮಂದಾರ ಮೌನವಾಗಿ ಎಲ್ಲ ನುಂಗುತ್ತಿದ್ದಳು. ಈಗೊಂದು ತಿಂಗಳ ಹಿಂದೆ ವಿಪರೀತ ಜ್ವರದಿಂದ ನರಳುತ್ತಿರುವಾಗಲೂ ಒಬ್ಬಳೇ ಆಸ್ಪತ್ರೆಗೆ ಹೋಗಿ ಡೇ ಕೇರ್‌ನಲ್ಲಿ ಅಗತ್ಯ ಚಿಕಿತ್ಸೆ ಪಡೆದು ವಾಪಸಾಗಿದ್ದಳು. ಮನೆ ಕೆಲಸದ ಸುಬ್ಬಿ 'ಅದೇನು ಕಂಪ್ಯೂಟರ್ ಮುಂದೆ ಯಾವಾಗ್ಲೂ ಕೂತಿರ್ತಾನೆ? ಅಮ್ಮ ಅಷ್ಟು ಕಷ್ಟಪಡ್ತಿದ್ದರೂ ಕಾಣೋಲ್ಲ; ಇವತ್ತು ನಾನು ಆಸ್ಪತ್ರೆಗೆ ಜೊತೆಗೆ ಹೋದೆ. ಏನ್ ಮಕ್ಕಳೋ' ಎಂದಿದ್ದು ನನ್ನ ಗಮನಕ್ಕೂ ಬಂದಿತ್ತು.

ಮಂಜು ಹೇಳಿ ಬೇಸರಿಸಿಕೊಂಡಿದ್ದಳು 'ಜೊತೆಗೆ ಹೋಗೋದಲ್ವ?ದಾರೀಲಿ ಹೆಚ್ಚುಕಡಿಮೆ ಆದರೆ ಅನ್ನುವ ಕಾಮನ್‌ಸೆನ್ಸ್ ಬೇಡವೆ? ಕಂಪ್ಯೂಟರ್‌ನಲ್ಲಿ ಗೇಮ್ ಆಡ್ತಿದ್ದಾನಂತೆ ಅಮ್ಮನ ಜೊತೆ ಹೋಗೋದ್ಬಿಟ್ಟು... ಸುಳ್ಳು ಹೇಳೋಕ್ಕೂ ಬರೋಲ್ಲ ಏನು ಸಾಯೋದೋ ಇವನ ಹತ್ತಿರ'.

ಅಂದು ಸಂಜೆ ಮಂದಾರಳಿಗೆ ಫೋನಾಯಿಸಿ ಆರೋಗ್ಯ ವಿಚಾರಿಸಿದಾಗ, ಈಗ ಪರವಾಗಿಲ್ಲವೆಂದೂ, ಸುಮುಖನೇ ತನ್ನ ಬೇಕು ಬೇಡಗಳನ್ನು ನೋಡಿಕೊಳ್ಳುತಿದ್ದನೆಂದೂ ಮಗನನ್ನು ವಹಿಸಿಕೊಂಡಾಗ ಮುಖಕ್ಕೆ ಹೊಡೆಂದತಾಗಿತ್ತು.

ಹಿಂದೆಯೇ, 'ನೀವು ಯಾರೂ ಬರದಿದ್ರೆ ನಾವು ಚೆನ್ನಾಗೇ ಇರ್ತೀವಿ. ಉಪದೇಶ ಕೊಡಬೇಡಿ ಅದೇ ದೊಡ್ಡ ಉಪಕಾರ' ಎಂದು ಮೆಸೇಜ್ ಎಸೆದು ನನ್ನ ಸ್ವಾಭಿಮಾನಕ್ಕೆ ಪೆಟ್ಟು ಕೊಟ್ಟಿದ್ದ ಸುಮುಖ. ಇನ್ನು ಅವರ ತಂಟೆಗೆ ಹೋಗ ಬಾರದೆಂದು ತೀರ್ಮಾನಿಸಿದ್ದೆ. ಎಷ್ಟೇ ಆಗಲಿ ಅವರ ಮಕ್ಕಳು ಅವರಿಗೆ ಹೆಚ್ಚು ಅಲ್ಲವೇ? ಅಂದೇ ಕೊನೆ, ಮಂದಾರಳನ್ನು ಅವಾಯ್ಡ್ ಮಾಡತೊಡಗಿದೆ.

ನಾನು ಮಂದಾರಳಿಂದ ವಿಮನಸ್ಕಳಾದ ವಿಷಯ ಮಂಜುವಿನ ಬಳಿ ನಾನು ಹೇಳಿಕೊಂಡಂತೆ ಮಂದಾರ ತನ್ನ ತಂಗಿ ಮಾಧವಿಯ ಬಳಿಯೂ ಹೇಳಿ ಅತ್ತಿದ್ದಳಂತೆ.

ಅಹಸ್ಕರ ಕೆಲಸಕ್ಕೆ ಸೇರಿದ ಮೇಲೆ ನಾನು ಕೆಲಸ ಬಿಟ್ಟಿದ್ದೆ. ಹೀಗಾಗಿ ಗೆಳೆಯರ ಬಳಗ ಬೆಳೆದಿತ್ತು ಸಕ್ರಿಯವಾಗಿ ಸಭೆ ಸಮಾರಂಭಗಳಿಗೆ ಹೋಗುತ್ತಿದ್ದೆ. ಮಂಜು, ತನ್ನಿಬ್ಬರ ಮಕ್ಕಳ ಮದುವೆಯಾದ ಮೇಲೆ ಅವಳೂ ಸಾವಕಾಶವಾಗಿ ಸಿಗುತ್ತಿದ್ದಳು. .

ಮತ್ತೆ ಮಗ್ಗುಲು ಬದಲಿಸಿದೆ ಮಂದಾರಳ ಮುಖ ಮನಕ್ಕಪ್ಪಳಿಸಿತು. 'ದೇವರೇ ಅವಳು ಕಣ್ಬಿಡಲಿ ನನ್ನ ಕ್ಷಮೆ ಆಲಿಸಲಾದರೂ ಅವಳಿಗೆ ಜ್ಞಾನ ಬರಿಸು' ಎಂದು ಪ್ರಾರ್ಥಿಸಿದೆ. ಎಷ್ಟು ಬೇಡವೆಂದರೂ ಸುತ್ತಿ ಸುತ್ತಿ ವಿಷಯ ಮಂದಾರಳ ಹತ್ತಿರಕ್ಕೆ ಬಂದು ನಿಲ್ಲುತ್ತಿತ್ತು.

* * *

ಮಂದಾರ ಕಣ್ಬಿಟ್ಟಿದ್ದಳು. ಮಂಜುವಿನಿಂದ ಕರೆ ಬರುತ್ತಲೇ ನಾನು ಓಡಿದೆ. ಸರತಿಯಲ್ಲಿ ಅವಳನ್ನು ನೋಡಿ ಕಣ್ತುಂಬಿತು. ಅವಳ ಭುಜದ ಮೇಲೆ ಕೈಯಿಟ್ಟು 'ಎಲ್ಲ ಸರಿಹೋಗುತ್ತೆ'ಎಂದೆ. ನೋಟ ಬದಲಿಸಿದಳು. ಎರಡು ನಿಮಿಷ ಅಲ್ಲೇ ಇದ್ದು ಹೊರಗೆ ಬಂದೆ.

'ಈ ಬಾರಿ ತೀರ್ಮಾನಿಸಿದ್ದೀವಿ, ಮಂದಾರಳನ್ನು ನಮ್ಮ ಮನೆಗೆ ಕರೆದುಕೊಂಡು ಹೋಗ್ತೀವಿ, ಅಕ್ಕನನ್ನು ನಾವೇ ನೋಡ್ಕೋತೀವಿ, ಇಷ್ಟು ದಿನ ಅವಳ ಮಗನಿಗೆ ಹೆದರಿ ಕೈಬಿಟ್ಟಿದ್ದೆವು ಇನ್ನು ಹಾಗೆ ಮಾಡೋಲ್ಲ' ದೃಢವಾಗಿ ಮಾಧವಿ ನುಡಿದಾಗ 'ಹಾಗೆ ಮಾಡಿ' ಎಂದೆ. ಆದರೆ ಮಂದಾರ ನನ್ನನ್ನು ಕ್ಷಮಿಸಿದಳೇ ಎಂಬ ದ್ವಂದ್ವ ಮನಸಲ್ಲೇ ಉಳಿಯಿತು.

ಮುಂದೆ ಒಂದು ವಾರ ವಾರ್ಡಿನಲ್ಲಿದ್ದು ಮನೆಗೆ ವಾಪಸಾಗಿದ್ದಳು ಮಂದಾರ. ಉಸ್ತುವಾರಿಗೆ ಹಿಂದೆಯೇ ಮಾಧವಿ. ವಿಷಯ ತಿಳಿಯುತ್ತಲೇ ನಾನೇ ಹೋದೆ. ಮಂದಾರಳನ್ನು ನೋಡಲು ಸುಮುಖನ ಅಪ್ಪಣೆ ಏಕೆ ಬೇಕು? ಗೆಳತಿಯಷ್ಟೇ ಮುಖ್ಯ. ಮೊದಲು ಮಾತನಾಡುವುದು ಕಷ್ಟವೆನಿಸಿದರೂ ನಂತರ ವಾಯ್ಸ್ ಬ್ರೇಕ್ ಮಾಡಿಯಾಯ್ತು. 'ನೀನು ನನ್ನ ಅವಾಯ್ಡ್ ಮಾಡಿದಾಗ ಎಷ್ಟು ಅತ್ತೆ ಗೊತ್ತಾ?'

ಮಂದಾರ ಮುಗ್ಧವಾಗಿ ಹೇಳುವಾಗ ನನಗೆ ನಾಚಿಕೆಯಾಯಿತು. ಅದಕ್ಕೊಂದು ಕಾರಣವಿತ್ತಲ್ಲ. 'ಹೋಗ್ಲಿ ಬಿಡು ಅದೆಲ್ಲ ಮರೆಯೋಣ ಸುಮುಖನೆಲ್ಲಿ?'ಎಂದೆ.

'ಮೀರಕ್ಕ , ಸುಮುಖನಿಗೆ ಕೌನ್ಸೆಲ್ಲಿಂಗ್ ಆಯ್ತು ಅದೇ ಆಸ್ಪತ್ರೆಯ ಮನೋವೈದ್ಯರಿಂದ. ಈಗ ಮೆಡಿಸಿನ್ಸ್ ಕೊಟ್ಟಿದ್ದಾರೆ. ಕೂಗಾಡ್ತಿಲ್ಲ ಶಾಂತವಾಗಿರ್ತಾನೆ. ಎಷ್ಟೋ ವಾಸಿ ಫಾಲೋ ಅಪ್ ಮಾಡಬೇಕು'

'ಓಹ್ ಒಳ್ಳೆಯದಾಗಲಿ' ಎಂದೆ.

'ಇದೇ ನೋಡಿ ವೈದ್ಯರ ಚೀಟಿ' ಮಾಧವಿ ಅಂದಾಗ ಓದಿದೆ. ಆಟಿಸಂ ಲಕ್ಷಣಗಳು, ಅತಿ ಭಾವುಕತೆ, ಅಂತೆಲ್ಲ ನಮೂದಿಸಿದ್ದರು. ಮಾತ್ರೆಗಳ ಜೊತೆಗೆ, ವ್ಯಾಯಾಮ, ಸಾಮಾಜಿಕ ಸಕ್ರಿಯತೆ ಉಪಯೋಗವಾದೀತೆಂಬ ಷರಾ. ನನ್ನ ಕರೆಗೆ ಓಗೊಟ್ಟು ರೂಮಿನಿಂದ ಹೊರ ಬಂದು ಅಮ್ಮನ ಪಕ್ಕದಲ್ಲಿ ಕುಳಿತ ಸುಮುಖನನ್ನು ನೋಡುವಾಗ ಅಯ್ಯೋ ಅನ್ನಿಸಿತು.

ಅವನ ಮೇಲೆ ಸಿಡುಕಬೇಕೆನ್ನಿಸಲಿಲ್ಲ, ಸಿಟ್ಟು ಬರಲಿಲ್ಲ ಪಾಪದ ಕೂಸು ಬಹುಶಃ ಮೊದಲೇ ವೈದ್ಯರಿಗೆ ತೋರಿಸಿದ್ದರೆ ಇಷ್ಟರಹೊತ್ತಿಗೆ ಸರಿ ಹೋಗಿರ್ತಿತ್ತೇನೋ. ಕನಿಷ್ಠ ಈಗಲಾದರೂ ಎಚ್ಚೆತ್ತುಕೊಂಡರಲ್ಲ.

* * *

ಹದಿನೈದು ದಿನಗಳ ನಂತರ, ಇನ್ನು ಚೇತರಿಸಿಕೊಳ್ಳುತ್ತಿರುವ ಮಂದಾರಳನ್ನು ಸುಧಾರಿಸಲು ಅನುವಾದಿತೆಂಬ ಅನಿಸಿಕೆಯಿಂದ ಮಾಧವಿ, ಮುಕುಂದ ಮಂದಾರಳನ್ನು ಕರೆದುಕೊಂಡು ಅವರ ಮನೆಗೆ ಕರೆದೊಯ್ದಿದ್ದರು. ಹಸುವಿನ ಜೊತೆ ಕರು.

ಅಹಸ್ಕರನ ಶಿಫಾರಸ್ಸಿನಲ್ಲಿ ಸುಮುಖನಿಗೊಂದು ಫ್ರಂಟ್ ಆಫೀಸಿನಲ್ಲಿ ಸಂದರ್ಶನವಿಲ್ಲದೆಯೇ ಕೆಲಸ ಸಿಕ್ಕಿತ್ತು. ಬೆಳಿಗ್ಗೆ ಎಂಟಕ್ಕೆ ಹೊರಟರೆ ರಾತ್ರಿ ಏಳಕ್ಕೆ ಮನೆ ತಲುಪುತ್ತಾನೆ. ನಿಯಮಿತವಾಗಿ ವೈದ್ಯರನ್ನು ಕಾಣುತಿದ್ದಾನೆ. ಬೆಳಿಗ್ಗೆ ಯೋಗ ಧ್ಯಾನದ ಕ್ಲಾಸಿಗೆ ಸೇರಿದ್ದಾನೆ. ಪರಿಣಾಮ, ಎಲ್ಲರಿಗೂ ಸಹನೀಯನಾಗುತ್ತಿದ್ದಾನೆ.

* * *

ಮಂದಾರ ಸಾಕಷ್ಟು ಗೆಲುವಾಗಿದ್ದಳು, ಮಾತಿನಲ್ಲೇ ತಿಳಿಯುತ್ತಿತ್ತು, ಆದರೆ ಸಂಪೂರ್ಣವಾಗಿ ಗುಣವಾಗಿಲ್ಲ. ವಾಕರ್ ಸಹಾಯ ಇಲ್ಲದೆ ನಡೆಯಲಾಗದು ಆದರೂ ಅಡ್ಡಿಯಿಲ್ಲ ನಿಧಾನವಾಗಿ ಸುಧಾರಿಸಿಕೊಳ್ಳುತ್ತಿದ್ದಾಳೆ.

ಸುಮುಖನ ವಾಟ್ಸಪ್ಪ್ ಸ್ಟೇಟಸ್ ಅಪ್ಡೇಟ್ ಆಗಿತ್ತು.

ನನ್ನ ಚಂದದ ಕುಟುಂಬ. ಫೋಟೋದಲ್ಲಿ ಅವನೊಂದಿಗೆ ಮಂದಾರ, ಮಾಧವಿ, ಮುಕುಂದ...

ಪಕ್ಕದಲ್ಲಿ ಒಂದು ಕಿರುನಗೆ ಬೀರುವ ಇಮೇಜ್. ಮುದ್ದು ಸೂಸುವ ಇಮೇಜ್ ನನ್ನ ಕಡೆಯಿಂದ ಉತ್ತರವಾಗಿ ಕಳುಹಿಸಿದೆ.